ಶ್ರೀ ಪ್ರಭುರಾಜ್ ಪಾಟೀಲ್.—(ಅ)ಗೆ ಉತ್ತರವಾಗಿ ಇನೇ ಮತು ವಿನೇ ಕ್ರಮಂಕದ ಕೆರೆಗಳ ಸರ್ವೆ ಕಾರ್ಯವನ್ನು ಪೂರ್ತಿಯಾಗಿ ಮಾಡಲಾಗಿದೆಯೆಂದು ಹೇಳಿದೆ. ಈ ಎರಡು ಕೆರೆಗಳಿಗೆ ತಗಲ್ಲಬಹುದಾದ ಅಂದಾಜು ವೆಚ್ಚ ವೆಷ್ಟು ? ಅವು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದೆಯೆ ?

†ಶ್ರೀ ಎಸ್. ಬಿ. ನಾಗರಾಳ್.—ಅದಕೆ ಸಂಬಂಧಪಟ್ಟ ಅಂದಾಜ ನನ್ನಲ್ಲಿಲ್ಲ, ಸರಿಯಾದ ವಿವರವಾದ ಅಂದಾಜ ಬಂದಕೂಡಲೇ ಮುಂದಿನ ಸಲ ಇದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರಭುರಾಜ್ ಪಾಟೀಲ್.—ಈ ಯೋಜದೆ ಫೀಜಿಬಲ್ ಆಗಿದೆಯೇ ?

ಶ್ರೀ ಎಸ್. ಬಿ ನಾಗರಾಳ್.—ಇದರ ಬಗ್ಗೆ ವಿವರವಾದ ತನಿಖೆ ಆಗಿದೆ. ಆದರೆ ಇದರ ಎಸ್ಟಿಮೇಟ್ಟೆಡ್ ಕಾಸ್ಟ್ ಎಷ್ಟೆಂಬುದು ಸರ್ಕಾರಕ್ಕೆ ವರದಿ ಬಂದಿಲ್ಲ. ಅದನ್ನು ಬೇಕಾದರೆ ಬೇಗ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಒದಗಿಸುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—(ಉ)ಗೆ ಉತ್ತರವಾಗಿ ಆದಷ್ಟು ಶೀಘ್ರ ಅವಧಿಯಲ್ಲಿ ಪೂರ್ತಿಗೊಳಿಸಲಾಗುವುದು ಎಂಬದಾಗಿ ಹೇಳಿದೆ. ನಿರ್ದಿಷ್ಟವಾಗಿ ಇನ್ನೆಷ್ಟು ದಿವಸಗಳಲ್ಲಿ ಇದು ಪೂರ್ತಿಯಾಗುತ್ತದೆಂಬುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಪ್ರಭುರಾಜ್ ಪಾಟೀಲ್.—ಸರ್ವೆ ಕಾರ್ಯವನ್ನು ಆದಷ್ಟು ಶೀಘ್ರ ಅವಧಿಯಲ್ಲಿ ಪೂರ್ತಿಗೊಳಿಸಲಾಗುವುದು ಎಂಬುದಾಗಿ ಹೇಳಿದ್ದೀರಿ. ಅದಕ್ಕೆ ಬಹಳ ಸಂತೋಷ ಆದರೆ ಇನ್ನುಳಿದ ಕೆರೆಗಳ ಪೈಕಿ ಯಾವ್ಯಾವುದು ಫೀಜಿಬಲ್ ಎಂದು ಕಂಡುಬರುತ್ತದೋ ಅವನ್ನೆಲ್ಲಾ ಇನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ತಿಮಾಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಇಂತಿಂಥ ಕೆರೆಗಳ ನಿರ್ಮಾಣ ಫೀಜಿಬಲ್ ಎಂಬುದಾಗಿ ಕಂಡುಬಂದ ನಂತರ, ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಯೋಗ್ಯ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಎಂದಿಗೂ ಹಿಂದುಮುಂದು ನೋಡುವುದಿಲ್ಲ.

PROMOTION TO OVERSEERS OF EX-DISTRICT LOCAL BOARDS

706 **Sri P. M. Bangi** (Jamkhandi).—

will the minister for Public Works and Electricty be pleased to state :—

(*a*) whether 14 Overseers who were serving in the erstwhile District Local Board upto 1st November 1959 were absorbed in P.W.D. as Overseers by Government Order No. PWD 63 SCO 59 Dt. Year 1959;

(*b*) whether the Government has accepted to count their entire services from their date of appointment uoto 1st November 1959 as per the decision of the Mysore High Court in Writ Petition No. 1616/64 dated 14th November 1966;

(*c*) if so, whether the benefit of promotion is not given as yet by Government couting their full length of service;

(*d*) the reason for the delay in not giving the benefit of promotion to the above said Overseers of the defunct District Local Board of North Karnataka by counting their full length of service from the date of their respective appointments?

Sri H M. Channabasappa (Minister for Public Works and Electricity.—)

(*a*) This is under consideration of Government.

(*b*) Yes.

(*c*) Please *vide* reply to clause (*a*).

(*d*) A provisional list is being published in respect of these officers and their ranking *vis-a-vis* the ranking of Public Works Department officers will have to be fixed as on 1st November 1959. After publication of the final list inclusive of the Ex-District Local Board Overseers, their promotion will also be considered.

ಶ್ರೀ ಪಿ.ಎಂ. ಬಾಂಗಿ —ಪ್ರಶ್ನೆಗೆ ಉತ್ತರವಾಗಿ ಈ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದೆ ಎಂಬುದಾಗಿ ಹೇಳೀದೆ. ನಾನು ವಿಲೇಜ್ ಪಂಚಾಯತ್ ಮತ್ತು ಲೋಕಲ್ ಬೋರ್ಡ್ ಆಕ್ಟ್‌ನ ರಿಪೀಲ್ ಅಂಡ್ ಸೇವಿಗ್ಸ್‌ನಲ್ಲಿ ಹೇಳಿರತಕ್ಕ ೨೪೨ ಪ್ರೊವಿಷನ್ ಏನೆಂಬುದನ್ನು ಇಲ್ಲಿ ತಿಳಿಸಬೇಕಾಗಿದೆ. ಅದು ಈ ರೀತಿ ಇದೆ —

"Every Officer or servant in the employ of a District Board immed iately before the date of the commencement of this Act shall be absorbed in the serviee of a Taluk Board orof the Government and shall until other provision is made, receive the salaries and allowances and be subject to the condition of service for which he war entitled or subject on such date"

ಈ ಪ್ರಾಕರ ಒಂದು ಪ್ರಾವಿಷನ್ ಇರುವಾಗ, ಅದರ ಬಗ್ಗೆ G.O. No. PWD.163.SCO 59/1959 ನಂಬರ್‌ನ ಒಂದು ಸರ್ಕಾರದ ಆಜ್ಞೆಯೇ ಇರುವಾಗ ಆ ಒಂದು ಅಭಿಪ್ರಾಯವನ್ನು ಮತ್ತೆ ಸರ್ಕಾರ ವಿಚಾರಮಾಡುವಂಥ ಪ್ರಶ್ನೆಯಿಲ್ಲ. ಸರ್ಕಾರದ ಪರವಾಗಿ ಹೊರಟಿರುವ ಆರ್ಡರ್ ಏನಿದೆಯೋ ಅದರ ಪ್ರಕಾರ ಅಬ್‌ಸಾಬ್ ಮಾಡಿದ್ದಾರೆ. ಆದ್ದರಿಂದ ಅದು ಇನ್ನುಮುಂದೆ ಪ.ತ್ತೆ ವಿಚಾರಮಾಡುವ ಪ್ರಶ್ನೆಯಾಗುವುದಿಲ್ಲ ಅಲ್ಲವೆ ?

†ಶ್ರಿ ಎಚ್. ಎಂ. ಚನ್ನಬಸಪ್ಪ —ಮಾನ್ಯ ಸದಸ್ಯರು (ಅ) ಪ್ರಶ್ನೆಯಲ್ಲಿ ಕೇಳಿರುವ ಹಾಗೆ ೧೪ ಮಂದಿ ಓವರ್‌ಸೀಯರ್ಸ್ ಅಲ್ಲ. ಅವರು ೧೭ ಮಂದಿ ಓವರ್‌ಸೀಯರ್ಸ್ ಇದರೆ ಅವರನ್ನೆಲ್ಲಾ ಗುಲ್ಬರ್ಗಾ ದಲ್ಲಿ ಕಮಿಷನರ್ ಅವರು ಲೋಕಲ್ ಬೋರ್ಡ್ ಕೆಲಸಕ್ಕೆ ಅವಶ್ಯಕವೆಂದು ಹೇಳಿ ಇಟ್ಟುಕೊಂಡರು. ಆದ್ದರಿಂದ ಅವರು ಇಲ್ಲಿಯವರೆಗೂ ಪಿ.ಡಬ್ಲ್ಯು.ಡಿ. ಯೊಳಗೆ ಅಬ್‌ಸ್ಟರ್ಬ್ ಆಗಲ್ಲಿಲ್ಲ. ಅವರಲ್ಲಿ ಕೆಲವರು ತಪ್ಪನ್ನು ಪಿ.ಡಬ್ಲ್ಯೂ.ಡಿ. ಯೊಳಗೇ ಅಬ್‌ಸಾರ್ಬ್ ಮಾಡಿಕೊಳ್ಳಿ ಎಂಬುದಾಗಿ ಅರ್ಜಿ ಕೊಟ್ಟಿದ್ದಾರೆ ಹಿಂಏನ ಸರ್ಕಾರದ ಆರ್ಡರ್ ಪ್ರಾಕರ ಇದನ್ನು ಮಾಡಿದೆ.

ಶ್ರೀ ಪಿ. ಎಂ. ಬಾಂಗಿ.—ಹೈಕೋರ್ಟ್ ಜಡ್ಜ್‌ಮೆಂಟ್ ಇದರ ಬಗ್ಗೆ ೧೯೬೬ ನೇ ಸಾಲಿನಲ್ಲಿ ಆಗಿದೆ. ಆದ್ದರಿಂದ ಆ ಪ್ರಕಾರ ಇನ್ನಾದರೂ ಇದರಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಅವರಿಗೆ ಪ್ರೊಮೋಷನ್ ಇತ್ಯಾದಿ ಸೌಲಭ್ಯಗಳನ್ನು ಕೊಡುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಈ ೧೭ ಜನರದು ಮಾತ್ರ ಉಳಿದುದು. ಡಿವಿಜನಲ್ ಕಮಿಷನರ ಕೈಕೆಳಗೆ ಲೋಕಲ್ ಬೋರ್ಡಿನಲ್ಲಿ ಕೆಲಸಮಾಡಿಕೊಂಡು ಬಂದಿದ್ದರು. ರೂಲ್ಸ್ ಪ್ರಕಾರ ಅವರನ್ನು ಅಬ್‌ಸಾರ್ಬ್ ಮಾಡುವುದರಲ್ಲಿ ಅಡ್ಡಿ ಇಲ್ಲ. ಅದರ ಬಗ್ಗೆ ಸೂಕ್ತ ಕ್ರಮವನ್ನು ತಗೆದುಕೊಳ್ಳುತ್ತೇವೆ ಹಿಂದೆ ಅವರು ಏನು ಸರ್ವಿಸ್ ಮಾಡಿದ್ದರೋ ಅದನ್ನು ಕೊಡುವುದಕ್ಕೆ ಅಡ್ಡಿಯೇನೂ ಇಲ್ಲ.